ಮೆ|| ಕರಿಸಿದ್ಧೇಶ್ವರ ಆರ್ಥಿಕ ಹಿಂದುಳಿದ ವರ್ಗಗಳ ಕಲ್ಲುಕುಟಿಕರ ಸಂಘ(5.50 acres), ಶ್ರೀ ಸಿದ್ಧರಾಮೇಶ್ವರ ಆರ್ಥಿಕ ಹಿಂದೂಳಿದ ವರ್ಗಗಳ ಕಲ್ಲುಕುಟಿಕರ ಸಂಘ(8.50 acres), ಶ್ರೀ ವೀರಭದ್ರೇಶ್ವರ ಕಲ್ಲುಕುಟಿಕರ ಸಂಘ(7.50 acres), ಶ್ರೀ ಬೋವಿವಡ್ಡರ ಕಲ್ಲುಕುಟಿಕರ ಸಂಘ(8.00 acres), ಶ್ರೀ ಬುಕ್ಕಸಾರ ವಡ್ಡಮ್ಮದೇವಿ ಬೋವಿವಡ್ಡರ ಕಲ್ಲುಕುಟಿಕರ ಸಂಘ(6.00 acres), ರವರು ಸರ್ವೆ ನಂ. 240, ಬುಕ್ಕಸಾಗರ ಗ್ರಾಮ ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆಯಲ್ಲಿ ಒಟ್ಟು ಒಟ್ಟು 35.5 ಎಕರೆ ಪ್ರದೇಶದಲ್ಲಿ ವರ್ಷಕ್ಕೆ ಒಟ್ಟು 125000 ಟನ್‌ಗಳಷ್ಟು ಕಟ್ಟಡ ಕಲ್ಲು ಗಣಿಗಾರಿಕೆಯನ್ನು ನಡೆಸುವ ಉದ್ದೇಶಕ್ಕಾಗಿ (ಯೋಜನಾ ಪ್ರದೇಶದಲ್ಲಿ ದಿನಾಂಕ: 09-09-2022 ರಂದು ಬೆಳಗ್ಗೆ 11.30 ಗಂಟೆಗೆ ನಡೆದ ಪರಿಸರ ಸಾರ್ವಜನಿಕ ಸಭೆಯ ನಡುವಳಗಳು:-

| | | |
|---|---|---|
| ಪರಿಸರ ಕುರಿತಾದ ಸಾರ್ವಜನಿಕ ಆಲಿಕೆ ಸಭೆಯ ಸ್ಥಳ | | ಉದ್ದೇಶಿತ ಯೋಜನಾ ಸ್ಥಳ ಮೆ|| ಕರಿಸಿದ್ಧೇಶ್ವರ ಆರ್ಥಿಕ ಹಿಂದೂಳಿದ ವರ್ಗಗಳ ಕಲ್ಲುಕುಟಿಕರ ಸಂಘ, ಶ್ರೀ ಸಿದ್ಧರಾಮೇಶ್ವರ ಆರ್ಥಿಕ ಹಿಂದೂಳಿದ ವರ್ಗಗಳ ಕಲ್ಲುಕುಟಿಕರ ಸಂಘ, ಶ್ರೀ ವೀರಭದ್ರೇಶ್ವರ ಕಲ್ಲುಕುಟಿಕರ ಸಂಘ, ಶ್ರೀ ಬೋವಿವಡ್ಡರ ಕಲ್ಲುಕುಟಿಕರ ಸಂಘ, ಶ್ರೀ ಬುಕ್ಕಸಾರ ವಡ್ಡಮ್ಮದೇವಿ ಬೋವಿವಡ್ಡರ ಕಲ್ಲುಕುಟಿಕರ ಸಂಘ, ರವರು ಸರ್ವೆ ನಂ.240, ಬುಕ್ಕಸಾಗರ ಗ್ರಾಮ ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ |
| ಹಾಜರಿದ್ದ ಪರಿಸರ ಸಾರ್ವಜನಿಕ ವಿಚಾರಣಾ ಸಮಿತಿಯ ಸದಸ್ಯರುಗಳ ವಿವರ | | ಪದನಾಮ |
| 1. | ಶ್ರೀ ಎನ್. ಮಹೇಶ ಬಾಬು, ಕ.ಆ.ಸೇ(ಹಿರಿಯ ಶ್ರೇಣಿ) ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ವಿಜಯನಗರ ಜಿಲ್ಲೆ | ಅಧ್ಯಕ್ಷರು |
| 2 | ಡಾ. ದೊಡ್ಡಶಾನಯ್ಯ, ಪರಿಸರ ಅಧಿಕಾರಿ & ಹಿರಿಯ ಪರಿಸರ ಅಧಿಕಾರಿಗಳು (ಪ್ರಭಾರ) ಕ.ರಾ.ಮಾ.ನಿ.ಮಂ.ಪ್ರಾದೇಶಿಕ ಕಛೇರಿ, ಬಳ್ಳಾರಿ | ಸದಸ್ಯ ಸಮಾವೇಶಕರು |

| ಹಾಜರಿದ್ದ ಅಧಿಕಾರಿಗಳ ವಿವರ | |
|---|---|
| 1 | ಶ್ರೀ ಹನುಮಂತಪ್ಪ ಹೆಚ್. ಸಹಾಯಕ ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ.ಪ್ರಾಕ, ಬಳ್ಳಾರಿ |
| 2 | ಶ್ರೀ ರವಿ, ಸಹಾಯಕ ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ.ಪ್ರಾಕ, ಬಳ್ಳಾರಿ |
| 3 | ಶ್ರೀ ಮಂಜುನಾಥ.ಪಿ ಸಹಾಯಕ ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ.ಪ್ರಾ.ಕ, ಬಳ್ಳಾರಿ |
| 4 | ಶ್ರೀ ಸುಭಾಶ ಕೆ. ಗ್ರಾಮ ಲೆಕ್ಕಾಧಿಕಾರಿ, ಬುಕ್ಕ ಸಾಗರ |
| 5 | ಶ್ರೀ ಅನಿಲ್ ಕುಮಾರ ಕಂದಾಯ ನಿರೀಕ್ಷಕರು, ಹೊಸಪೇಟೆ |
| 6 | ಶ್ರೀ ಕುರಟ್ಟಿ ಪೂರ್ಣತೇಜ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬುಕ್ಕ ಸಾಗರ |

| ಮೆ॥ ಬುಕ್ಕಸಾಗರ ಕಲ್ಲುಕುಟಿಕರ ಸಂಘದ ಪರವಾಗಿ ಹಾಜರಿದ್ದ ಪ್ರತಿನಿಧಿಗಳು. | |
|---|---|
| 1. | ಶ್ರೀ ದೊಡ್ಡ ಹನುಮಂತಪ್ಪ ಬುಕ್ಕ ಸಾಗರ, ವಡ್ಡಮ್ಮದೇವಿ ಕಲ್ಲುಕುಟಿಕರ ಸಂಘ, ಬುಕ್ಕ ಸಾಗರ |
| 2. | ಶ್ರೀ ಪಂಪಾಪತಿ ಎಮ್ ಶ್ರೀ ಸಿದ್ದರಾಮೇಶ್ವರ ಆರ್ಥಿಕ ಹಿಂದೂಳಿದ ವರ್ಗಗಳ ಕಲ್ಲುಕುಟಿಕರ ಸಂಘಬುಕ್ಕ ಸಾಗರ |
| 3. | ಶ್ರೀ ಪಿ.ಭೀಮಪ್ಪ ಶ್ರೀ ಬೋವಿವಡ್ಡರ ಕಲ್ಲುಕುಟಿಕರ ಸಂಘ ಬುಕ್ಕಸಾಗರ |
| 4. | ಶ್ರೀ ಎಮ್.ವಿ ಮರಿಯಪ್ಪ ಶ್ರೀ ವೀರಭದ್ರೇಶ್ವರ ಕಲ್ಲುಕುಟಿಕರ ಸಂಘ ಬುಕ್ಕಸಾಗರ |
| 5 | ಶ್ರೀ ಬಳ್ಳಾರಿ ಹುಲುಗಪ್ಪ ಶ್ರೀ ಕರಿಸಿದ್ದೇಶ್ವರ ಆರ್ಥಿಕ ಹಿಂದೂಳಿದ ವರ್ಗಗಳ ಕಲ್ಲುಕುಟಿಕರ ಸಂಘ ಬುಕ್ಕಸಾಗರ |
| 6 | ಶ್ರೀ ಆರ್ ನಾಗರಾಜ ಸದಸ್ಯರು ಶ್ರೀ ಕರಿಸಿದ್ದೇಶ್ವರ ಆರ್ಥಿಕ ಹಿಂದೂಳಿದ ವರ್ಗಗಳ ಕಲ್ಲುಕುಟಿಕರ ಸಂಘ ಬುಕ್ಕಸಾಗರ |
| **1.** ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಅಧಿಕಾರಿಗಳ ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ.<br>**2.** ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಸಾರ್ವಜನಿಕರ ವಿಳಾಸ ಮತ್ತು ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-2** ರಲ್ಲಿ ಲಗತ್ತಿಸಲಾಗಿದೆ. | |

**ಪೀಠಿಕೆ**

ಮೆ॥ ಕರಿಸಿದ್ದೇಶ್ವರ ಆರ್ಥಿಕ ಹಿಂದೂಳಿದ ವರ್ಗಗಳ ಕಲ್ಲುಕುಟಿಕರ ಸಂಘ(5.50 acres), ಶ್ರೀ ಸಿದ್ದರಾಮೇಶ್ವರ ಆರ್ಥಿಕ ಹಿಂದೂಳಿದ ವರ್ಗಗಳ ಕಲ್ಲುಕುಟಿಕರ ಸಂಘ(8.50 acres), ಶ್ರೀ ವೀರಭದ್ರೇಶ್ವರ ಕಲ್ಲುಕುಟಿಕರ ಸಂಘ(7.50 acres), ಶ್ರೀ ಬೋವಿವಡ್ಡರ ಕಲ್ಲುಕುಟಿಕರ ಸಂಘ(8.00 acres), ಶ್ರೀ ಬುಕ್ಕಸಾಗರ ವಡ್ಡಮ್ಮದೇವಿ ಬೋವಿವಡ್ಡರ ಕಲ್ಲುಕುಟಿಕರ ಸಂಘ(6.00 acres), ರವರು ಸರ್ವೆ ನಂ. 240, ಬುಕ್ಕಸಾಗರ ಗ್ರಾಮ ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆಯಲ್ಲಿ ಒಟ್ಟು 35.5 ಎಕರೆ ಪ್ರದೇಶದಲ್ಲಿ ವರ್ಷಕ್ಕೆ ಒಟ್ಟು 125000 ಟನ್‌ಗಳಷ್ಟು ಕಟ್ಟಡ ಕಲ್ಲು ಗಣಿಗಾರಿಕೆಯನ್ನು ಸ್ಥಾಪಿಸಲು ಉದ್ದೇಶಕ್ಕಾಗಿ ಪ್ರಸ್ತಾವನೆಯನ್ನು ಮಾಡಿರುತ್ತಾರೆ.

ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಇವರು ಪರಿಸರ (ಸಂರಕ್ಷಣೆ) ಕಾಯ್ದೆ 1986 ಅಡಿಯಲ್ಲಿ ದಿನಾಂಕ 14.09.2006 ರಲ್ಲಿ ಜಾರಿಗೊಳಿಸಿರುವ ಪರಿಸರ ಅಘಾತ ಅಧ್ಯಯನದ ಅಧಿಸೂಚನೆ (ತಿದ್ದುಪಡಿ ದಿನಾಂಕ 01.12.2009) ರನ್ವಯ ಯೋಜನಾ ಪ್ರವರ್ತಕರು ಸದರಿ ಯೋಜನೆಗೆ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ.

ಸದರಿ ಉದ್ದೇಶಿತ ಯೋಜನೆಯು ಮೇಲೆ ತಿಳಿಸಿದ ಅಧಿಸೂಚನೆ ಅಡಿಯಲ್ಲಿ ಒಳಪಡುವುದರಿಂದ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ.ಆ ಮೇರೆಗೆ ಯೋಜನಾ ಪ್ರವರ್ತಕರು ಪರಿಸರ ವಿಮೋಚನಾ ಪತ್ರವನ್ನು ಪಡೆಯಲು ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಇವರು ಸದರಿ ಯೋಜನೆಯ ಟರ್ಮ್ಸ್ ಆಫ್ ರೆಫೆರೆನ್ಸ್ ಸಂಖ್ಯೆ : SEIAA 213 MIN 2022 Combined with SEIAA 214 MIN 2022 SEIAA 215 MIN 2022, SEIAA 216 MIN 2022 SEIAA 217 MIN 2022 ದಿನಾಂಕ: 25.07.2022. ರ ಷರತ್ತುಬದ್ಧ ನಿಬಂಧನೆಗಳ ಅನ್ವಯ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸುವುದು ಕಡ್ಡಾಯವಾಗಿರುತ್ತದೆ.

11/9/24

ಯೋಜನಾ ಪ್ರವರ್ತಕರು ಷರತ್ತುಬದ್ಧ ನಿಬಂಧನೆಗಳನ್ನು ಪಾಲಿಸುವ ಸಲುವಾಗಿ ಮೆ.ಹಾರಿಜೋನ್ ವೆಂಚೂರ್, ಬೆಂಗಳೂರು ಇವರು ತಯಾರಿಸಿದ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನ ವರದಿ ಮತ್ತು ಕಾರ್ಯಕಾರಿ ಸಾರಾಂಶವನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಸಿದ್ಧಪಡಿಸಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಿಕೊಡಲು ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಇವರಿಗೆ ದಿನಾಂಕ 27-07-2022 ರಂದು ಮನವಿ ಸಲ್ಲಿಸಿರುತ್ತಾರೆ.

ಯೋಜನಾ ಪ್ರವರ್ತಕರ ಸದರಿ ಮನವಿಯ ಮೇರೆಗೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ ಇವರಿಗೆ ಪರಿಸರ ಸಾರ್ವಜನಿಕ ಆಲಿಕಾ ಸಭೆ ನಡೆಸಲು ಸೂಕ್ತ ದಿನಾಂಕ ಹಾಗೂ ಸಮಯವನ್ನು ನೀಡಲು ದಿನಾಂಕ 28-07-2022 ಪತ್ರದ ಮೂಲಕ ಕೋರಲಾಗಿರುತ್ತದೆ.

ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ, ವಿಜಯನಗರ ರವರ ಆದೇಶದನ್ವಯ ದಿನಾಂಕ: 09-09-2022 ರಂದು ಬೆಳಿಗ್ಗೆ 11.30 ಗಂಟೆಗೆ ಯೋಜನಾ ಸ್ಥಳದಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸಮ್ಮತಿ ಸೂಚಿಸಿರುತ್ತಾರೆ. ಈ ಸಭೆಗೆ ಪೂರಕವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ ಕನ್ನಡ ಪ್ರಭ (ಕನ್ನಡ) ಹಾಗೂ ಡೆಕ್ಕನ್ ಹೆರಾಲ್ಡ್ (ಆಂಗ್ಲ) ಗಳಲ್ಲಿ ದಿನಾಂಕ 07-08-2022 ರಂದು ಪತ್ರಿಕಾ ಪ್ರಕಟಣೆ ಬಳ್ಳಾರಿ ಜಿಲ್ಲೆಯ ಸ್ಥಳೀಯ ದಿನಪತ್ರಿಕೆಯಾದ "ಈ ನಮ್ಮ ಕನ್ನಡ ನಾಡು" ಪತ್ರಿಕೆಯಲ್ಲಿ ಸಹ ದಿನಾಂಕ: 09-08-2022 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆ ಕುರಿತಾದ ಪ್ರಕಟಣೆಯನ್ನು, ನೀಡಲಾಗಿರುತ್ತದೆ.(ಅನುಬಂಧ-3) ಈ ಯೋಜನೆಗೆ ಸಂಬಂಧಿಸಿದಂತೆ ಸಾರ್ವಜನಿಕರ ಅನಿಸಿಕೆ/ಆಕ್ಷೇಪಣೆ/ಸೂಚನೆ/ಸಲಹೆ/ಅಭಿಪ್ರಾಯಗಳನ್ನು ಲಿಖಿತವಾಗಿ 30 ದಿನಗಳ ಒಳಗೆ ಸಲ್ಲಿಸಲು ಕೋರಲಾಗಿತ್ತು.

ಸದರಿ ಯೋಜನೆಗೆ ಸಂಬಂಧಿಸಿದಂತೆ ಯೋಜನಾ ಪ್ರವರ್ತಕರು ಸಲ್ಲಿಸಿದ್ದ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನದ ವರದಿ ಮತ್ತು ಕಾರ್ಯಕಾರಿ ಸಾರಂಶದ ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸಾರ್ವಜನಿಕರ ಪರಾಮರ್ಶೆಗೆ ಇಡಲಾಗಿತ್ತು.

- ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ
- ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಪಂಚಾಯತ್, ವಿಜಯನಗರ ಜಿಲ್ಲೆ, ಹೊಸಪೇಟೆ
- ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ವಿಜಯನಗರ ಜಿಲ್ಲೆ.
- ತಹಶೀಲ್ದಾರರ ಕಾರ್ಯಾಲಯ, ಹೊಸಪೇಟೆ
- ತಾಲ್ಲೂಕು ಪಂಚಾಯತಿ ಕಾರ್ಯಾಲಯ, ಹೊಸಪೇಟೆ
- ಗ್ರಾಮ ಪಂಚಾಯಿತಿ ಕಾರ್ಯಾಲಯ, ಬುಕ್ಕಸಾಗರ ಗ್ರಾಮ, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ.
- ವಿಭಾಗಿಯ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ.

- ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ.
- ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
- ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ. 49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560001

ಸದರಿ ಪರಿಸರ ಸಾರ್ವಜನಿಕ ಸಭೆಯ ಕುರಿತು ಮೇಲೆ ತಿಳಿಸಿದ ಎಲ್ಲಾ ಇಲಾಖೆಯವರಿಗೆ ಪರಿಸರ ಸಾರ್ವಜನಿಕ ಸಭೆ ನಡೆಯುತ್ತಿರುವ ಕುರಿತು ಹಾಗೂ ಪತ್ರಿಕಾ ಪ್ರಕಟಣೆ ಬಗ್ಗೆ ದಿನಾಂಕ: 10-08-2022 ರಂದು ಮಾಹಿತಿಯನ್ನು ನೀಡಲಾಗಿರುತ್ತದೆ.

ಮಾನ್ಯ ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ ರವರು ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ವಿಜಯನಗರ ಜಿಲ್ಲೆ ರವರಿಗೆ ಅಧಿಕಾರ ನೀಡಿ ದಿನಾಂಕ :09-09-2022 ರಂದು ನಡೆಯುವ ಪರಿಸರ ಆಲಿಕೆ ಸಭೆಯನ್ನು ನಡೆಸಲು ಆದೇಶಿಸಿರುತ್ತಾರೆ. (ಅನುಬಂಧ-4 ರಲ್ಲಿ ಲಗತ್ತಿಸಿದೆ)

ಮೇಲೆ ತಿಳಿಸಿದ ಅಧಿಸೂಚನೆಯಲ್ಲಿನ ಎಲ್ಲಾ ವಿಧಿ-ವಿಧಾನಗಳನ್ನು ಕ್ರಮಬದ್ಧವಾಗಿ ನಿಯಮಾನುಸಾರ ಪಾಲಿಸಿ ದಿನಾಂಕ 09-09-2022 ರಂದು ಬೆಳಿಗ್ಗೆ 11.30 ಗಂಟೆಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ವಿಜಯನಗರ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಯೋಜನಾ ಸ್ಥಳ ಸರ್ವೆ ನಂ. 240, ಬುಕ್ಕಸಾಗರ ಗ್ರಾಮ ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆಯಲ್ಲಿ ಪ್ರಾರಂಭಿಸಲಾಯಿತು.

**ಸಭೆಯ ನಡವಳಿಗಳು**

ಸದಸ್ಯ ಸಮಾವೇಷಕರು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ, ಬಳ್ಳಾರಿ ವಲಯ ಕಛೇರಿಯ ಹಿರಿಯ ಪರಿಸರ ಅಧಿಕಾರಿ (ಪ್ರಭಾರ) ಹಾಗೂ ಪರಿಸರ ಅಧಿಕಾರಿಗಳಾದ ಡಾ. ದೊಡ್ಡಶಾನಯ್ಯ ಅವರು ಶ್ರೀ ಎನ್. ಮಹೇಶ ಬಾಬು, ಕ.ಆ.ಸೇ, (ಹಿರಿಯ ಶ್ರೇಣಿ) ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ವಿಜಯನಗರ ಜಿಲ್ಲೆ ಅವರಿಗೆ ಸ್ವಾಗತ ಕೋರಿದರು. ಮೆ॥ ಬುಕ್ಕಸಾಗರ ಕಲ್ಲುಕುಟಿಕರ ಸಂಘದ ಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ, ಎಲ್ಲಾ ಸಾರ್ವಜನಿಕರಿಗೆ, ಪತ್ರಕರ್ತರಿಗೆ ಹಾಗೂ ಇತರೆ ಇಲಾಖೆಯ ಅಧಿಕಾರಿಗಳಿಗೆ ಸ್ವಾಗತ ಕೋರಿದರು ಹಾಗೂ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಕೇಂದ್ರ ಸರ್ಕಾರ, ಇವರು ಪರಿಸರ(ಸಂರಕ್ಷಣೆ)ಕಾಯ್ದೆ, 1986 ರಡಿಯಲ್ಲಿ ದಿನಾಂಕ : 14-09-2006 ರಲ್ಲಿ ಜಾರಿಗೊಳಿಸಿರುವ ಪರಿಸರ ಅಘಾತ ಅಧ್ಯಯನದ ಅಧಿಸೂಚನೆ ಬಗ್ಗೆ ಸಂಕ್ಷಿಪ್ತವಾಗಿ ವಿವರಣೆ ನೀಡಿದರು. ಸದರಿ ಯೋಜನೆಗೆ ಸಂಬಂಧಪಟ್ಟ ಪ್ರಾಧೀಕಾರದಿಂದ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುವ ವಿಷಯವನ್ನು ಸಹ ಸಭೆಗೆ ತಿಳಿಸಿದರು. ಸಾರ್ವಜನಿಕ ಪರಿಸರ ಆಲಿಕೆ ಸಭೆಯ ಪೂರ್ವದಲ್ಲಿ ನಿಯಮಾನುಸಾರ ಕೈಗೊಂಡ ಕ್ರಮಗಳ ಬಗ್ಗೆ ವಿವರಣೆಯನ್ನು ನೀಡಿದರು ಹಾಗೂ ಸಾರ್ವಜನಿಕ ಆಲಿಕೆಯ ಸಭೆಯ ಅಧ್ಯಕ್ಷತೆಯನ್ನು ವಹಿಸುವಂತೆ ಮತ್ತು ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಅಪರ ಜಿಲ್ಲಾಧಿಕಾರಿಗಳನ್ನು ಕೋರಿದರು.

ಶ್ರೀ ಎನ್. ಮಹೇಶ ಬಾಬು, ಕ.ಆ.ಸೇ, (ಹಿರಿಯ ಶ್ರೇಣಿ) ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ವಿಜಯನಗರ ಜಿಲ್ಲೆ ರವರು ಸಭೆಯನ್ನು ಉದ್ದೇಶಿಸಿ ಯೋಜನೆಗೆ ಪರಿಸರ ಸಾರ್ವಜನಿಕ ವಿಚಾರಣೆಯನ್ನು ನಡೆಸುವುದು ಕಡ್ಡಾಯವಾಗಿದೆ ಎಂದು ತಿಳಿಸಿದರು. ಪರಿಸರ ಅಘಾತ ಅಧ್ಯಯನ ಅಧಿಸೂಚನೆ ದಿನಾಂಕ: 14-09-2006 ರ ಬಗ್ಗೆ ವಿವರವಾದ ಮಾಹಿತಿಯನ್ನು ಸಭೆಯಲ್ಲಿದ್ದ ಸಾರ್ವಜನಿಕರಿಗೆ ತಿಳಿಸಿದರು ಹಾಗೂ ಪರಿಸರ ಸಾರ್ವಜನಿಕ ವಿಚಾರಣೆಯ ಅಗತ್ಯತೆಯನ್ನು ಸಂಕ್ಷಿಪ್ತವಾಗಿ ವಿವರಿಸಿದರು.

ಪ್ರಸ್ತಾವಿತ ಯೋಜನೆಯ ಪ್ರಸ್ತುತಿಯನ್ನು ನೀಡುವಂತೆ ಅವರು ಯೋಜನಾ ಪ್ರತಿಪಾದಕರಿಗೆ ಮಾಹಿತಿ ನೀಡಿದರು, ಅಲ್ಲಿ ವಿಚಾರಣೆಗೆ ಹಾಜರಿದ್ದ ಸಾರ್ವಜನಿಕರು ಪರಿಸರ ಸಮಸ್ಯೆಗಳ ಕುರಿತು ಉದ್ದೇಶಿತ ಯೋಜನೆಗೆ ತಮ್ಮ ಎಲ್ಲಾ ಅಭಿಪ್ರಾಯ/ಸಲಹೆ/ಪತ್ರಗಳನ್ನು ಯೋಜನೆಯ ಬಗ್ಗೆ ಲಿಖಿತ ಅಥವಾ ಮೌಖಿಕವಾಗಿ ಪ್ರಸ್ತುತಪಡಿಸುವಂತೆ ವಿನಂತಿಸಿಕೊಂಡರು. ಈ ನಡವಳಿಯು ಲಿಖಿತ ದಾಖಲೆ ಮತ್ತು ವಿಡಿಯೋಗ್ರಾಫಿ ಎರಡನ್ನು ಒಳಗೊಂಡಿದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಅಪರ ಜಿಲ್ಲಾಧಿಕಾರಿಗಳ ಆದೇಶದಂತೆ ಮೆ॥ ಬುಕ್ಕಸಾಗರ ಕಲ್ಲುಕುಟಿಕರ ಸಂಘದ ಪರವಾಗಿ ಶ್ರೀ ಸಚಿನ್, ಮೆ.ಹಾರಿಜೋನ್ ವೆಂಚೂರ್, ಬೆಂಗಳೂರು ರವರು ತಯಾರಿಸಿರುವ ಕ್ರಿಯಾತ್ಮಕ ಸಾರಾಂಶದಲ್ಲಿ ತಿಳಿಸಿರುವ ಕ್ರಮಗಳು, ಶಬ್ಧದ ಮಟ್ಟದ ಸುಧಾರಿತ ಕ್ರಮಗಳು, ನೀರಿನ ಗುಣಮಟ್ಟ ಸುಧಾರಿತ ಕ್ರಮಗಳು, ಗಾಳಿಯ ಗುಣಮಟ್ಟ ಸುಧಾರಿತ ಕ್ರಮಗಳು, ಮಣ್ಣಿನ ಗುಣಮಟ್ಟದ ಸುಧಾರಿತ ಕ್ರಮಗಳು, ಜಮೀನಿನ ಬಳಕೆ, ಸಸ್ಸೀಕರಣ ಪೋಟೊಗಳು, ಗುತ್ತಿಗೆ ಪ್ರದೇಶದೊಳಗಿನ ರಕ್ಷಣಾತ್ಮಕ ಕ್ರಮಗಳ ಪೋಟೊ, ಪರಿಸರ ರಕ್ಷಣೆಯ ಬಜೆಟ್ ಚಟುವಟಿಕೆಗಳನ್ನೊಳಗೊಂಡ ವಿವರಗಳನ್ನು ಮೌಖಿಕವಾಗಿ ಸಭೆಗೆ ಮಂಡಿಸಿದರು.

ಸಭೆಯ ಅಧ್ಯಕ್ಷರು ಈ ಉದ್ದೇಶಿತ ಯೋಜನೆಯ ಬಗ್ಗೆ ಪರಿಸರ ಕುರಿತಾಗಿ ಯಾವುದೇಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳು ಯಾವುದಾದರೂ ಇದ್ದಲ್ಲಿ ಸಭೆಗೆ ಮಂಡಿಸುವಂತೆ ಸಭೆಯಲ್ಲಿ ನೆರೆದಿದ್ದ ಸಾರ್ವಜನಿಕರನ್ನು ಕೋರಿದರು.

ಆಮೇರೆಗೆ ಸಾರ್ವಜನಿಕರು ಯೋಜನೆಯ ಬಗ್ಗೆ ತಮ್ಮ ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳನ್ನು ಈ ಕೆಳಕಂಡಂತೆ ಮಂಡಿಸಿದರು.

1. **ಶ್ರೀ ಶಂಕ್ರಪ್ಪ ಬುಕ್ಕಸಾಗರ ಗ್ರಾಮ**– ರವರು ಮಾತನಾಡುತ್ತಾ, ಸದರಿ ಪ್ರದೇಶದಲ್ಲಿ ಕಲ್ಲು ಗಣಿಗಾರಿಕೆ ನಡೆಸಲು ಅನುಮತಿ ನೀಡುವುದರಿಂದ ಗ್ರಾಮದ ಬಡವರಿಗೆ ಅನುಕೂಲವಾಗುತ್ತದೆ ಎಂದರು. ಹಾಗು ಸದರಿ ಯೋಜನೆಯನ್ನು ಪ್ರಾರಂಭಿಸಲು ಅನುಮತಿ ನೀಡುವಂತೆ ಮನವಿ ಮಾಡಿದರು.

2. **ಶ್ರೀ ಪಂಪಾಪತಿ ಬುಕ್ಕಸಾಗರ ಗ್ರಾಮ** –ರವರು ಮಾತನಾಡುತ್ತಾ, ತಮ್ಮ ಗ್ರಾಮದವರ ಕುಲಕಸುಬು ಕಲ್ಲು ಹೊಡೆಯುವುದು ಆಗಿದ್ದು ಇದರಿಂದಲೆ ಜೀವನ ಸಾಗಿಸುತ್ತಿದ್ದು, ಕಲ್ಲು ಹೊಡೆಯುವ ಕೆಲಸ ಹೊರತು ಪಡಿಸಿ ಬೇರೆ ಕಸುಬು ತಮಗೆ ತಿಳಿದಿಲ್ಲ ಎಂದು ಸಭೆಗೆ ತಿಳಿಸಿದರು. ಸದರಿ ಪ್ರದೇಶದಲ್ಲಿ ಕಲ್ಲು ಗಣಿಗಾರಿಕೆ ನಡೆಸಲು ಅನುಮತಿ ನೀಡುವುದರಿಂದ ಗ್ರಾಮದ ಬಡವರಿಗೆ ಅನುಕೂಲವಾಗುತ್ತದೆ

ಎಂದರು. ಹಾಗು ಸದರಿ ಯೋಜನೆಯನ್ನು ಪ್ರಾರಂಭಿಸಲು ಅನುಮತಿ ನೀಡುವಂತೆ ಮನವಿ ಮಾಡಿದರು.

3. **ಶ್ರೀ ಹುಲುಗಪ್ಪ ಬುಕ್ಕಸಾಗರ ಗ್ರಾಮ**– ರವರು ಮಾತನಾಡುತ್ತಾ, ಸದರಿ ಪ್ರದೇಶದಲ್ಲಿ ಕಲ್ಲು ಗಣಿಗಾರಿಕೆ ನಡೆಸಲು ಅನುಮತಿ ನೀಡುವುದರಿಂದ ಗ್ರಾಮದ ಬಡವರಿಗೆ ಅನುಕೂಲವಾಗುತ್ತದೆ ಎಂದರು. ಹಾಗು ಸದರಿ ಯೋಜನೆಯನ್ನು ಪ್ರಾರಂಭಿಸಲು ಅನುಮತಿ ನೀಡುವಂತೆ ಮನವಿ ಮಾಡಿದರು.

4. **ಶ್ರೀದೇವರಾಜ ಎನ್‌ಜಿಒ ಬೆಂಗಳೂರು**– ರವರು ಮಾತನಾಡುತ್ತಾ, ಸದರಿ ಯೋಜನೆಯು ಸ್ಥಳೀಯ ಬಡವರು ಜೀವನ ನಡೆಸಲು ಅನುಕುಲ ಮಾಡಿಕೊಡುವುದರಿಂದ ಸದರಿ ಪ್ರದೇಶದಲ್ಲಿ ಕಲ್ಲು ಗಣಿಗಾರಿಕೆ ನಡೆಸಲು ಅನುಮತಿ ನೀಡುವಂತೆ ಮನವಿ ಮಾಡಿದರು.

5. **ಶ್ರೀ ಆಂಜನೇಯ ರಾಣೆಬೆನ್ನೂರು** – ರವರು ಮಾತನಾಡುತ್ತಾ, ಸದರಿ ಯೋಜನೆಯು ಸ್ಥಳೀಯ ಬಡವರು ಜೀವನ ನಡೆಸಲು ಅನುಕುಲ ಮಾಡಿಕೊಡುವುದರಿಂದ ಸದರಿ ಪ್ರದೇಶದಲ್ಲಿ ಕಲ್ಲು ಗಣಿಗಾರಿಕೆ ನಡೆಸಲು ಯಾವುದೇ ಷರತ್ತುಗಳನ್ನು ವಿಧಿಸದೆ ಅನುಮತಿ ನೀಡುವಂತೆ ಮನವಿ ಮಾಡಿದರು.

6. **ಶ್ರೀಮತಿ ಮಂಜುಳಾ ಚಿತ್ರದುರ್ಗ** ರವರು ಮಾತನಾಡುತ್ತಾ, ಸದರಿ ಯೋಜನೆ ಪ್ರಾರಂಭಿಸುವ ಸಂಬಂಧ ಈ ಭಾಗದಲ್ಲಿ ಸಭೆಯನ್ನು ಆಯೋಜಿಸಿರುವುದರಿಂದ ಸ್ಥಳೀಯರ ಮುಖದಲ್ಲಿ ಆಶಾಭಾವನೆಯನ್ನು ಕಾಣುತ್ತಿರುವುದಾಗಿ ತಿಳಿಸಿದರು. ಸದರಿ ಪ್ರದೇಶದಲ್ಲಿ ಕಲ್ಲು ಗಣಿಗಾರಿಕೆ ನಡೆಸಲು ಅನುಮತಿ ನೀಡುವಂತೆ ಮನವಿ ಮಾಡಿದರು.

7. **ಶ್ರೀ ಬಿ.ವಿ ರೆಡ್ಡಿ ಬಳ್ಳಾರಿ**– ರವರು ಮಾತನಾಡುತ್ತಾ, ಸದರಿ ಪ್ರದೇಶದಲ್ಲಿ ಕಲ್ಲು ಗಣಿಗಾರಿಕೆ ನಡೆಸಲು ಅನುಮತಿ ನೀಡುವುದರಿಂದ ಗ್ರಾಮದ ಬಡವರಿಗೆ ಅನುಕೂಲವಾಗುತ್ತದೆ ಎಂದರು. ಮುಂದುವರೆದು ಮಾತನಾಡುತ್ತಾ ಸದರಿ ಯೋಜನೆಯು ಪ್ರಾರಂಭವಾಗುವುದರಿಂದ ಡಿ.ಎಮ್.ಎಫ್ ಮತ್ತು ಸಿ.ಎಸ್.ಆರ್ ಹಣ ಬಿಡುಗಡೆಯಾಗುವುದರಿಂದ ಗ್ರಾಮದ ಅಭಿವೃದ್ದಿಯಾಗುತ್ತೆ ಹಾಗಾಗಿ ಸದರಿ ಯೋಜನೆಗೆ ಅನುಮತಿ ನೀಡುವಂತೆ ಮನವಿ ಮಾಡಿದರು.

8. **ಶ್ರೀ ಸುನಂದಾ ರೆಡ್ಡಿ ಪರಿಸರವಾದಿ**– ರವರು ಮಾತನಾಡುತ್ತಾ, ಸದರಿ ಯೋಜನೆಯಿಂದ ಸ್ಥಳೀಯ ಬಡವರಿಗೆ ಉದ್ಯೋಗವಕಾಶಗಳು ದೊರಕುತ್ತವೆ ಎಂದು ತಿಳಿಸಿದರು. ಸದರಿ ಪ್ರದೇಶದಲ್ಲಿ ಕಲ್ಲು ಗಣಿಗಾರಿಕೆ ನಡೆಸಲು ಯಾವುದೇ ಷರತ್ತುಗಳನ್ನು ವಿಧಿಸದೆ ಅನುಮತಿ ನೀಡುವಂತೆ ಮನವಿ ಮಾಡಿದರು.

9. **ಶ್ರೀಮತಿ ಗೀತಾ ಕಮಲಾಪುರ**– ರವರು ಮಾತನಾಡುತ್ತಾ, ಸದರಿ ಯೋಜನೆಯಿಂದ ಉದ್ಯೋಗವಕಾಶಗಳು ದೊರಕುತ್ತವೆ ಎಂದು ತಿಳಿಸಿ, ಕಲ್ಲು ಗಣಿಗಾರಿಕೆ ನಡೆಸಲು ಯಾವುದೇ ಅನುಮತಿ ನೀಡುವಂತೆ ಮನವಿ ಮಾಡಿದರು.

ಕೊನೆಯಲ್ಲಿ ಸಾರ್ವಜನಿಕ ಆಲಿಕೆ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಎನ್. ಮಹೇಶ ಬಾಬು, ಕ.ಆ.ಸೇ, (ಹಿರಿಯ ಶ್ರೇಣಿ) ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ವಿಜಯನಗರ ಜಿಲ್ಲೆ ರವರು ತಮ್ಮ ಅಧ್ಯಕ್ಷೀಯ ಮಾತುಗಳನ್ನಾಡುತ್ತ, ಸದರಿ ಸಭೆಯು ಪರಿಸರ ಸಾರ್ವಜನಿಕ ಸಭೆಯಾಗಿದ್ದು, ಇದರಲ್ಲಿ ಎಲ್ಲರಿಗೂ ಮಾತನಾಡಲು ಮುಕ್ತ ಅವಕಾಶವನ್ನು ಕಲ್ಪಿಸಲಾಗಿದೆ. ಹಾಗು ತಾವು ಮಾತನಾಡಿದ ಪರ/ವಿರೋಧ ಅಭಿಪ್ರಾಯಗಳನ್ನ ದಾಖಲಿಸಲಾಗಿದೆ. ಈ ಸಭೆಯಲ್ಲಿ ನಾವುಗಳು ಯಾವುದೇ ತಿರ್ಮಾನ ತೆಗೆದುಕೊಳ್ಳುವದಿಲ್ಲ, ಈ ಸಭೆಯ ಉದ್ದೇಶ ಸಾರ್ವಜನಿಕರ ಅಭಿಪ್ರಾಯ ಹಾಗೂ ಸಲ್ಲಿಸಿರುವ ಮೌಖಿಕ ಮತ್ತು ಲಿಖಿತ ಅಭಿಪ್ರಾಯಗಳನ್ನು ಸಂಗ್ರಹಿಸಿ, ಹಾಗೂ ತಾವುಗಳು ಸಲ್ಲಿಸಿರುವ ಮನವಿಗಳು, ಹೆಚ್ಚಿನ ಸಂಖ್ಯೆಯ ಲಿಖಿತ ಅಭಿಪ್ರಾಯಗಳು/ ಸಲಹೆಗಳು/ಆಕ್ಷೇಪಣೆಗಳನ್ನು ಸ್ವೀಕರಿಸಿದ್ದೇವೆ. ಅದನ್ನು ದಾಖಲಿಸಲಾಗುವುದು. ಈ ಸಭೆಯ ನಡವಳಿಯನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ದಾಖಲಿಸಿ, ಛಾಯಾಚಿತ್ರಗಳ (ಪ್ರತಿಯನ್ನು ಅನುಬಂಧ-6 ರಲ್ಲಿ ಲಗತ್ತಿಸಲಾಗಿದೆ) ವಿಡಿಯೋ ಇರುವ ಸಿ.ಡಿ. ಗಳ (ಪ್ರತಿಯನ್ನು ಅನುಬಂಧ-7 ರಲ್ಲಿ ಲಗತ್ತಿಸಲಾಗಿದೆ) ಇದನ್ನು ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು. ಇವರಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕೇಂದ್ರ ಕಛೇರಿ ಬೆಂಗಳೂರು ರವರ ಮುಖಾಂತರ ಕಳುಹಿಸಿಕೊಡಲಾಗುವುದು ಎಂದು ತಿಳಿಸಿದರು.

ಈ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡ ಎಲ್ಲಾ ಸಾರ್ವಜನಿಕರಿಗೆ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರಿಗೆ ಧನ್ಯವಾದಗಳನ್ನು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ಡಾ.ದೊಡ್ಡಶಾನಯ್ಯ
ಹಿರಿಯ ಪರಿಸರ ಅಧಿಕಾರಿ(ಪ್ರಭಾರ)
ಕ.ರಾ.ಮಾ.ನಿ.ಮಂ.ವಲಯ ಕಛೇರಿ, ಬಳ್ಳಾರಿ

11/9/22
Additional Deputy Commissioner
Vijayanagara District,
ಶ್ರೀ ಎನ್. ಮಹೇಶ ಬಾಬು, ಕ.ಆ.ಸೇ (ಹಿರಿಯ ಶ್ರೇಣಿ)
ಅಪರ ಜಿಲ್ಲಾಧಿಕಾರಿಗಳು ಹಾಗೂ
ಅಪರ ಜಿಲ್ಲಾದಂಡಾಧಿಕಾರಿಗಳು ವಿಜಯನಗರ ಜಿಲ್ಲೆ
ಅಧ್ಯಕ್ಷರು ಜಿಲ್ಲಾ ಪರಿಸರ ಸಾರ್ವಜನಿಕ ಆಲಿಕೆ

## ಅನುಬಂಧ

1. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಅಧಿಕಾರಿಗಳ ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ.

2. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಸಾರ್ವಜನಿಕರ ವಿಳಾಸ ಮತ್ತು ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-2** ರಲ್ಲಿ ಲಗತ್ತಿಸಲಾಗಿದೆ.

3. ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ ಕನ್ನಡ ಪ್ರಭ (ಕನ್ನಡ) ಹಾಗೂ ಡೆಕ್ಕನ್ ಹೆರಾಲ್ಡ್ (ಆಂಗ್ಲ) ಗಳಲ್ಲಿ ದಿನಾಂಕ 07-08-2022 ರಂದು ಪತ್ರಿಕಾ ಪ್ರಕಟಣೆ ಬಳ್ಳಾರಿ ಜಿಲ್ಲೆಯ ಸ್ಥಳೀಯ ದಿನಪತ್ರಿಕೆಯಾದ "ಈ ನಮ್ಮ ಕನ್ನಡ ನಾಡು" ಪತ್ರಿಕೆಯಲ್ಲಿ ದಿನಾಂಕ: 09-08-2022 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆ ಕುರಿತಾದ ಪ್ರಕಟಣೆಯ ಪ್ರತಿಯನ್ನು **ಅನುಬಂಧ-3** ರಲ್ಲಿ ಲಗತ್ತಿಸಲಾಗಿದೆ.

4. ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ರವರು ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ರವರಿಗೆ , ವಿಜಯನಗರ ಜಿಲ್ಲೆ ರವರಿಗೆ ಅಧಿಕಾರ ನೀಡಿ ದಿನಾಂಕ : 09-09-2022 ರಂದು ನಡೆಯುವ ಪರಿಸರ ಆಲಿಕೆ ಸಭೆಯನ್ನು ನಡೆಸಲು ಆದೇಶಿಸಿರುತ್ತಾರೆ. ಸದರಿ ಜ್ಞಾಪನಾ ಪತ್ರದ ಪ್ರತಿಯನ್ನು **ಅನುಬಂಧ-4** ರಂತೆ ಲಗತ್ತಿಸಿದೆ.

5. ಪರಿಸರ ಸಾರ್ವಜನಿಕ ಸಭೆಯ ಸಮಯದಲ್ಲಿ ಒಟ್ಟು 04 ಲಿಖಿತ ಹೇಳಿಕೆ/ ಆಕ್ಷೇಪಣೆಗಳು ಸ್ವೀಕೃತಿಯಾಗಿರುತ್ತವೆ ಅವುಗಳನ್ನು **ಅನುಬಂಧ-5** ರಲ್ಲಿ ಲಗತ್ತಿಸಲಾಗಿದೆ.

6. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಪ್ರಕ್ರಿಯೆಯ ಛಾಯಾಚಿತ್ರಗಳ ಪ್ರತಿಯನ್ನು **ಅನುಬಂಧ-6** ರಲ್ಲಿ ಲಗತ್ತಿಸಲಾಗಿದೆ.

7. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಆಡಿಯೋ ಮತ್ತು ವಿಡಿಯೋ ಇರುವ ಸಿ.ಡಿ. ಗಳ ಪ್ರತಿಯನ್ನು **ಅನುಬಂಧ-7** ರಲ್ಲಿ ಲಗತ್ತಿಸಲಾಗಿದೆ.

11/9/22

Additional Deputy Commissioner
Vijayanagara District
Hosapete

| | |
|---|---|
| **ಡಾ.ದೊಡ್ಡಶಾನಯ್ಯ** | **ಶ್ರೀ ಎನ್. ಮಹೇಶ್ ಬಾಬು, ಕ.ಆ.ಸೇ(ಹಿರಿಯ ಶ್ರೇಣಿ)** |
| ಹಿರಿಯ ಪರಿಸರ ಅಧಿಕಾರಿ(ಪ್ರಭಾರ) | ಅಪರ ಜಿಲ್ಲಾಧಿಕಾರಿಗಳು ಹಾಗೂ |
| ಕ.ರಾ.ಮಾ.ನಿ.ಮಂ.ವಲಯ ಕಛೇರಿ, ಬಳ್ಳಾರಿ | ಅಪರ ಜಿಲ್ಲಾದಂಡಾಧಿಕಾರಿಗಳು ವಿಜಯನಗರ ಜಿಲ್ಲೆ |
| | ಅಧ್ಯಕ್ಷರು ಜಿಲ್ಲಾ ಪರಿಸರ ಸಾರ್ವಜನಿಕ ಆಲಿಕೆ ಸಭೆ |